**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**<u>ಫೌಜುದಾರಿ ಪ್ರಕರಣ ಸಂಖ್ಯೆ : 54/2023</u>**

**ಚಾ.ಸಾಃ 1, ಫ್ರಾ.ಸಾಃ 1**

| | |
|---|---|
| ಸಾಕ್ಷಿದಾರನ ಹೆಸರು | ಕೃಷ್ಣಮೂರ್ತಿ ಭಟ್ಟ |
| ತಂದೆಯ ಹೆಸರು | ಸುಬ್ರಾಯ ಭಟ್ಟ |
| ವಯಸ್ಸು | 50 ವರ್ಷಗಳು |
| ಉದ್ಯೋಗ | ಪತ್ರಿಕಾ ವರದಿಗಾರರು |
| ವಾಸ್ತವ್ಯ | ಹಳಗೇರಮಕ್ಕಿ, ದಿಬ್ಬಣಗಲ್, ಹೊನ್ನಾವರ ತಾಲೂಕು |

**<u>ಸಾಕ್ಷಿಯನ್ನು ದಿನಾಂಕಃ 03-10-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಎಪಿಪಿಯವರಿಂದ,</u>**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿರುತ್ತೇನೆ.

ದಿನಾಂಕ 05-03-2023 ರಂದು ನಾನು ನನ್ನ ಕೆಲಸದ ನಿಮಿತ್ತ ಬೆಳಿಗ್ಗೆ ಹೊನ್ನಾವರಕ್ಕೆ ಬಂದಿದ್ದು ನನ್ನ ಕೆಲಸ ಮುಗಿಸಿಕೊಂಡು ಸಂಜೆ 06-00 ಗಂಟೆ ಸಮಯಕ್ಕೆ ಮನೆಗೆ ಬಂದಿರುತ್ತೇನೆ. ನನ್ನ ಮನೆಯಲ್ಲಿ ನಾನೊಬ್ಬನೇ ವಾಸವಾಗಿದ್ದು ನಾನು ಹೊನ್ನಾವರಕ್ಕೆ ಬರುವಾಗ ಮನೆಗೆ ಬೀಗ ಹಾಕಿಕೊಂಡು ಬಂದಿದ್ದೆ. ವಾಪಸ್ಸು ಸಂಜೆ ಮನೆಗೆ ಹೋಗಿ ಮನೆಯ ಒಳಗೆ ಅಡಿಗೆ ಕೋಣೆಗೆ ಹೋದಾಗ ಅಡಿಗೆ ಕೋಣೆಯ ಮೇಲ್ಛಾವಣಿಯ ಹಂಚುಗಳನ್ನು ತೆಗೆದಿದ್ದವು, ಮನೆಯ ಹಿಂಬಾಗಿಲಿನ ಬಾಗಿಲು ತೆಗೆಯಲಾಗಿತ್ತು. ಆದ್ದರಿಂದ ಮನೆಗೆ ಯಾರೋ ಕಳ್ಳರು ಬಂದು ಹೋಗಿರಬಹುದು ಎಂಬ ಸಂಶಯದಿಂದ ಇಡೀ ಮನೆಯನ್ನು ಹುಡುಕಾಡಿದಾಗ ಹಾಲ್‌ನಲ್ಲಿ ಟೇಬಲ್ ಮೇಲೆ ಒಂದು ಟಿವಿ ಇಟ್ಟಿದ್ದು ಸದರಿ ಟಿವಿಯ ಮುಂಭಾಗದಲ್ಲಿ ರೂ.2,500-00 ಹಣ ಇಟ್ಟಿದ್ದು ಅದು ಕಾಣಲಿಲ್ಲ. ಬೀರು ಬಾಗಿಲು ತೆಗೆದಿದ್ದು ಅದರಲ್ಲಿ ಏನೂ ಕಳ್ಳತನ ಆಗಿರಲಿಲ್ಲ. ಮರುದಿನ ಮನೆಯಲ್ಲಿ ಹಣ ಕಳ್ಳತನ ಆದ ಬಗ್ಗೆ ದೂರು ನೀಡಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದೂರು ನೀಡಿದ ನಂತರ ಪೋಲಿಸರು ನಮ್ಮ ಮನೆಗೆ ಬಂದಿದ್ದು ನಾನು ತೋರಿಸಿದ ಸ್ಥಳದಲ್ಲಿ ಪೋಲಿಸರು ಪಂಚರ ಸಮಕ್ಷಮ ಸ್ಥಳ ಪಂಚನಾಮೆ ತಯಾರಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಫೋಟೋ ತೆಗೆದಿದ್ದು ಫೋಟೋಗಳನ್ನು ನೋಡುತ್ತಿದ್ದು ನಿಪಿ-3 ಎಂದು ಗುರುತಿಸಲಾಯಿತು.

ಅದೇ ದಿನ ಪೋಲೀಸರು ಆರೋಪಿಯನ್ನು ಪತ್ತೆ ಮಾಡಿ ನಮ್ಮ ಮನೆಯ ಹತ್ತಿರ ಕರೆದುಕೊಂಡು ಬಂದಿದ್ದು ಆರೋಪಿ ಯಾವ ಸ್ಥಳದಲ್ಲಿ ಹಂಚನ್ನು ತೆಗೆದು ಒಳಬಂದಿದ್ದು ಮತ್ತು ಹಣ ಕಳ್ಳತನ ಮಾಡಿದ ಸ್ಥಳವನ್ನು ಪೋಲೀಸರಿಗೆ ತೋರಿಸಿದ್ದು ಆ ಕಾಲಕ್ಕೆ ಒಂದು ಪಂಚನಾಮೆ ತಯಾರಿಸಿದ್ದು ಫೋಟೋ ತೆಗೆದಿರುತ್ತಾರೆ. ಸದರಿ ಫೋಟೋಗಳನ್ನು ನೋಡುತ್ತಿದ್ದು ನಿಪಿ-4 ಎಂದು ಗುರುತಿಸಲಾಯಿತು. ಆ ದಿನ

ಪೋಲೀಸರು ಕರೆದುಕೊಂಡು ಬಂದ ಆರೋಪಿಯನ್ನು ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ**

ಕಳ್ಳತನವಾದ ದಿನವೇ ನಾನು ಪೋಲೀಸರಿಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ದೂರನ್ನು 6 ನೇ ತಾರೀಕು ಬೆಳಿಗ್ಗೆ 10-30 ಕ್ಕೆ ನೀಡಿರುತ್ತೇನೆ. ನಾನು ದೂರನ್ನು ನೀಡಿ ಮನೆಗೆ ಹೋಗಿದ್ದೆ. ನಂತರ ಅದೇ ದಿನ ಪೋಲೀಸರು ಆರೋಪಿಯನ್ನು ಕರೆದಕೊಂಡು ಮನೆಗೆ ಬಂದಿದ್ದರು. ಪೋಲಿಸರು ಆರೋಪಿಯನ್ನು ಕರೆದುಕೊಂಡು ಮನೆಗೆ ಬಂದಾಗ ಮಧ್ಯಾಹ್ನ ಸುಮಾರು 12-45 ಆಗಿತ್ತು. ನನ್ನ ಸಮಕ್ಷಮ ಆರೋಪಿ ಮತ್ತು ಪೋಲೀಸರು ಮಾತುಕತೆ ಮಾಡಿಲ್ಲ. ಪಂಚರನ್ನು ನಾನು ಕರೆಸಿಲ್ಲ. ಪೋಲೀಸರು ಕರೆಸಿರುತ್ತಾರೆ. ಪೋಲೀಸರು, ಆರೋಪಿ ಮತ್ತು ಪಂಚರು ಎಲ್ಲರೂ ಒಟ್ಟಾಗಿ ಬಂದಿರುತ್ತಾರೆ. ಪೋಲೀಸರು ಯಾವ ರೀತಿ ಕಳ್ಳತನ ಮಾಡಿದ್ದೀಯಾ ಅಂತ ಕೇಳಿದರು. ಅದಕ್ಕೆ ಆರೋಪಿ ಹಿಂಬದಿಯ ಬಾಗಿಲಿನ ಮೂಲಕ ಬಂದು ಹಂಚನ್ನು ತೆಗೆದ ಸ್ಥಳವನ್ನು ತೋರಿಸಿರುತ್ತಾನೆ. ನಮ್ಮ ಮನೆಯಲ್ಲಿ ಪಂಚನಾಮೆ ಮಾಡಿಕೊಂಡು ಫೋಟೋ ತೆಗೆದಿರುತ್ತಾರೆ. ಆರೋಪಿಯ ಸಮಕ್ಷಮ ನಾನು ಕಳುವು ಸ್ಥಳವನ್ನು ತೋರಿಸಿರುತ್ತೇನೆ. ಸದರಿ ಸ್ಥಳದಲ್ಲಿ ಪೋಲೀಸರು ಫೋಟೋ ತೆಗೆಸಿರುತ್ತಾರೆ. ಪೋಲೀಸರು ನನ್ನ ಎಷ್ಟು ಸಹಿ ತೆಗೆದುಕೊಂಡಿದ್ದರು ನನಗೆ ನೆನಪಿಲ್ಲ. ಪಂಚನಾಮೆಗೆ ಮತ್ತು ದೂರಿಗೆ ಸಹಿ ಹಾಕಿದ್ದೇನೆ. ಪಂಚನಾಮೆಯನ್ನು ನಾನು ಓದಿ ಸಹಿ ಹಾಕಿದ್ದೇನೆ. ನಾನು ಪಂಚನಾಮೆಗೆ ಪೋಲೀಸ್ ಠಾಣೆಯಲ್ಲಿ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ಆರೋಪಿಯನ್ನು ಕರೆದುಕೊಂಡು ಬಂದಿಲ್ಲ ಎಂದರೆ ಸರಿಯಲಲ. ಆರೋಪಿ ಯಾವುದೇ ಸ್ಥಳವನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಯಾವುದೇ ಹಣ ಕಳ್ಳತನ ಆಗಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**